ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Monday, 10th May 1976/Vaishakha, 20, 1898 S.E.

The House met in the Assembly Chamber, Vidhana Soudha, at One of the Clock.

[MADAM SPEAKER (SMT. K. S. NAGARATHNAMMA) in the Chair]

STARRED QUESTIONS
(to which Oral answers were given)

D.A. and T.A. drawn by Ministers

111. Sri T. R. Shamanna (Fort).—Will the Chief Minister be pleased to refer to answers furnished to S Q. No. 337 (423), S.Q. No. 767(373)and S Q. No. 123(51) on 16-3-1973, 22-5-1973 and 13-3-1974 respectively and state :—

the daily and travelling allowance drawn by the each Minister (including Chief Minister) and Minister of State/ since then ?

Sri H. M Channabasappa (Minister for Public Works) [On behalf of Sri D. Devaraj Urs (Chief Minister)].—

Statement placed on the Table of the House *

ಶ್ರೀ ಟಿ. ಆರ್. ಶಾಮಣ್ಣ —ಈಗ ನನಗೆ ಕೊಟ್ಟಿರುವ ಪಟ್ಟಿಪ್ರಕಾರ ಮಾನ್ಯ ಮಂತ್ರಿಗಳ ದಿನಭತ್ಯ ೯೬೫ನೇ ಇಸವಿಗೆ ೩ ಸಾವಿರ ರೂಪಾಯಿಗಳಿಂದ ಹಿಡಿದು ೧೩ ಸಾವಿರ ರೂಪಾಯಿಗಳವರೆಗೂ ಇದೆ. ಮತ್ತು ಟ್ರಾವಲಿಂಗ್ ಅಲೋಯನ್ಸ್ ೧೨ ಸಾವಿರ ರೂಪಾಯಿಗಳ ಪಟ್ಟಿದಲ್ಲಿ ಬರತಕ್ಕವರು ೪ ಜನ ಇದ್ದಾರೆ. ಮತ್ತು ೨೦ ಸಾವಿರ ರೂಪಾಯಿಗಳ ಪಟ್ಟದಲ್ಲಿ ಬರತಕ್ಕವರು ಮತ್ತು ೨೫-೩೦ ಸಾವಿರ ರೂಪಾಯಿಗಳ ಪಟ್ಟದಲ್ಲಿ ಬರತಕ್ಕವರು ೧೦ ಜನ ಇದ್ದಾರೆ. ೩೦-೪೨ ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿರತಕ್ಕವರು ಸುಮಾರು ೧೦ ಜನ ಇದ್ದಾರೆ. ಮಂತ್ರಿಗಳು ಅನೇಕ ಸಾರಿ ದೆಹಲಿಗೆ ವಿಮಾನದಲ್ಲಿ ಪ್ರಯಾಣ ಮಾಡುತ್ತಾರೆ. ಮತ್ತು ಪರದೇಶಗಳಿಗೆ ಹೋಗಿದ್ದಾರೆ. ಇದೆಲ್ಲಾ ಈ ಪಟ್ಟಿಯಲ್ಲಿ ಸೇರಿದೆಯೇ ?

---

* Copy placed in the Karnataka Legislature Library ride No. 44, dated 10-5-76.

† ಶ್ರೀ ಎಚ್. ಎಂ. ಚನ್ನಬಸಪ್ಪ —ಎಲ್ಲಾ ಟಿ.ಎ.ಡಿ.ಎ. ಅನ್ನೂ ಸರ್ಕಾರದ ಬೊಕ್ಕಸದಿಂದ ಸರ್ಕಾರದ ಕಾರ್ಯಕಲಾಪಗಳಿಗೋಸ್ಕರ ತೆಗೆದುಕೊಂಡಿರತಕ್ಕದು ಎಲ್ಲಾ ಇದರಲ್ಲಿ ಸೇರಿದೆ.

ಶ್ರೀ ಟಿ. ಆರ್ ಶಾಮಣ್ಣ —ಮಾನ್ಯ ಮಂತ್ರಿಗಳು ತಿಂಗಳಿಗೆ ಎರಡು ಸಾರಿ ದೆಹಲಿಗೆ ಹೋಗುತ್ತಾರೆ ಅದೆಲ್ಲಾ ಇದರಲ್ಲಿ ಒಂದಿದೆಯೇ ? ಪ.ಹಾತ್ಮಾ ಗಾಂಧೀಜಿಯವರಿಗೆ ಅವರು ಜೀವಂತವಾಗಿದ್ದಾಗ ಕೆಲಸಕಾರ್ಯಗಳನ್ನು ಮಾಡಲು ಎಷ್ಟು ಸಮಯ ಸಿಕ್ಕುತ್ತಿತ್ತೋ ಅದಕ್ಕಿಂತ ಹೆಚ್ಚು ಸಮಯ ಮಾನ್ಯ ಮಂತ್ರಿಗಳಿಗೆ ಇದೆ ಹೀಗಿರುವಾಗ ಹಿಂದೆ ಗಾಂಧೀಜಿಯವರು ಮೂರನೇ ದರ್ಜೆಯ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಈಗ ಮಂತ್ರಿಗಳ ಪ್ರಯಾಣಕ್ಕೆ ಹೆಚ್ಚು ಹಣ ಖರ್ಚು ಆಗುತ್ತಿರುವುದರಿಂದ ಮತ್ತು ಪ್ರಯಾಣ ಸೌಕರ್ಯಗಳು ಕಡಿಮೆ ಇರುವುದರಿಂದ ಮಾನ್ಯ ಮಂತ್ರಿಗಳು ಬಸ್ಸಿನಲ್ಲಿ ಪ್ರಯಾಣ ಮಾಡಿ ಜನಗಳಿಗೆ ಇರತಕ್ಕ ಕಷ್ಟಗಳನ್ನೂ ತಿಳಿದುಕೊಂಡು ಅದನ್ನು ನಿವಾರಣೆ ಮಾಡುವ ದೃಷ್ಟಿಯಿಂದಲೂ ಜನಗಳಿಗೆ ವ.ತ್ತು ಅಧಿಕಾರಿಗಳಿಗೆ ಮಾದರಿಯಾಗಿ ಮಾರ್ಗ ದರ್ಶನ ಮಾಡುವ ದೃಷ್ಟಿಯಿಂದಲೂ ಮತ್ತು ತಮ್ಮ ಪ್ರಯಾಣ ವೆಚ್ಚವನ್ನು ಕಡಿಮೆ ಮಾಡುವ ದೃಷ್ಟಿಯಿಂದಲೂ ಅವರು ಬಸ್ಸಿನಲ್ಲಿ ಪ್ರಯಾಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಬಸ್ಸಿನಲ್ಲಿ ಪ್ರಯಾಣ ಮಾಡುವುದು ರಾಜ್ಯಕ್ಕೆ ಉಪಯುಕ್ತವಾಗುವುದಿಲ್ಲ.

ಶ್ರೀ ಟಿ ಆರ್. ಶಾಮಣ್ಣ —ಈ ಪಟ್ಟಿಯಲ್ಲಿ ಕೊಟ್ಟಿರುವ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳು ೨೫ ಸಾವಿರ ರೂಪಾಯಿಗಳ ಪ್ರಯಾಣ ಭತ್ಯವನ್ನು ತೆಗೆದುಕೊಂಡಿದ್ದಾರೆ. ಒಬ್ಬರು ರಾಜ್ಯ ಮಂತ್ರಿಗಳು ೪೨ ಸಾವಿರ ರೂಪಾಯಿಗಳ ಪ್ರಯಾಣ ಭತ್ಯವನ್ನು ತೆಗೆದುಕೊಂಡಿದ್ದಾರೆ ಸಾರಿಗೆ ಮಂತ್ರಿಗಳ ವರ್ಷಕ್ಕೆ ದಿನ ಭತ್ಯವನ್ನು ೧೩ ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ. ಪ್ರಯಾಣ ಭತ್ಯ ೩ ಸಾವಿರ ರೂಪಾಯಿಗಳನ್ನು ತೆಗೆದಂಕೊಂಡಿದ್ದಾರೆ. ಕಾರಣ ಅವರು ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನ ಕಾರನ್ನು ಉಪಯೋಗಿಸುತ್ತಿದ್ದರು ಎಂದು ಕಾಣುತ್ತದೆ ಈ ಪ್ರಯಾಣ ಭತ್ಯ ಮೊದಲು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇದ್ದದ್ದು ೫ ಲಕ್ಷಕ್ಕಿಂತ ಹೆಚ್ಚಾಗಿದೆ. ಅದೇ ರೀತಿ ಡಿ.ಎ ಕೂಡ ಏರಿದೆ. ೩೫೯ ೩೫೯ ದಿನ ಭತ್ಯ ಮಂತ್ರಿ ಪ್ರವಾಸ ಭತ್ಯ ಏರುತ್ತಾ ಇರುವುದರಿಂದ ಇದರ ಬಗ್ಗೆ ಏನಾದರೂ ಒಂದು ನಿಯಮವನ್ನು ಹಾಕಿಕೊಂಡು ಕಟ್ಟುನಿಟ್ಟಾಗಿ ರಾಜ್ಯದ ಬೊಕ್ಕಸಕ್ಕೆ ಅನಾವಶ್ಯಕವಾಗಿ ಹೆಚ್ಚು ಖರ್ಚಾಗದ ಹಾಗೆ ಬರೀ ರಾಜ್ಯದ ಕೆಲಸಕ್ಕೇ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೆ ಒಂದು ನಿಯಮವನ್ನು ಹಾಕಿಕೊಳ್ಳುತ್ತೀರಾ ?

ಶ್ರೀ ಎಚ್ ಎಂ. ಚನ್ನಬಸಪ್ಪ.—ಮಂತ್ರಿಗಳಾಗಿರತಕ್ಕವರು ಸರ್ಕಾರದ ಉದ್ಯೋಗಕ್ಕೆ ಮತ್ತು ಸರ್ಕಾರದ ಕಾರ್ಯನಿರ್ವಹಣೆಗೆ ಈ ಎರಡಕ್ಕೆ ಹೊರತು ಬೇರೆ ಯಾವ ಕಾರ್ಯಕ್ಕೂ ಆ ಹಣವನ್ನು ಉಪಯೋಗ ಮಾಡುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ —ಮಾನ್ಯ ಮಂತ್ರಿಗಳು ಚೆನ್ನಾಗಿ ಆಲೋಚಿಸುತ್ತಾರೆ. ಭತ್ಯವನ್ನು ತೆಗೆದುಕೊಳ್ಳುತ್ತಾರೆ. ಈಗೆ ಸ್ವಲ್ಪ ದಿವಸಗಳ ಹಿಂದೆ ಮಂತ್ರಿಮಂಡಲದ ಎಲ್ಲಾ ಮಂತ್ರಿಗಳೂ ದೆಹಲಿಗೆ ಹೋಗಿ ಅಲ್ಲಿಂದ ಮುಂದಕ್ಕೆ ಕೋಮಗಾಟು ನಗರದ ಅಧಿವೇಶನಕ್ಕೆ ಹೋಗಿಬಂದರು. ಅದೆಲ್ಲಾ ಇದರಲ್ಲಿ ಸೇರಿದಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾರ್ವಜನಿಕ ಕ್ಷೇತ್ರದ ಕೆಲಸಕ್ಕೆ ಏನಾ ಬೇರೆ ಕೆಲಸಗಳಿಗೆ ನಮ್ಮ ಸ್ವಂತ ಖರ್ಚಿನಿಂದ ಹೋಗಬೇಕಾಗುತ್ತದೆ. ಸರ್ಕಾರಿ ಕೆಲಸಕ್ಕೆ ಹೋದಾಗ ಸರ್ಕಾರಿ ಬೊಕ್ಕಸದಿಂದ ಹಣವನ್ನು ಡ್ರಾ ಮಾಡುತ್ತೇವೆ.

ಶ್ರೀ ಟಿ ಎಂ. ಮಂಜುನಾಥ.—ಒಬ್ಬರೂ ರಾಜ್ಯಮಂತ್ರಿಗಳು ೪೨ ಸಾವಿರ ರೂಪಾಯಿಗಳ ಟಿ.ಎ.ಡಿ.ಎ ತೆಗೆದುಕೊಳ್ಳಬೇಕಾದರೆ ಅಷ್ಟು ಗಂಭೀರವಾದ ಸರ್ಕಾರದ ಕೆಲಸ ಏನಿತ್ತು ? ಯಾವ ಸರ್ಕಾರಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನತೆಗೆ ಯಾವ ಯಾವ ಕೆಲಸಗಳನ್ನು ಮಾಡಿಕೊಟ್ಟಿದ್ದಾರೆ ಎಂಬುದನ್ನು ಹೇಳುತ್ತೀರಾ ? ಸಾರ್ವಜನಿಕರ ಹಣವನ್ನು ಮನಸ್ಸು ಬಂದಹಾಗೆ ರಾಜಕೀಯ ಪಾರ್ಟಿಯವರಿಗೆ ಉಪಯೋಗಿಸುವುದು ಸರಿಯೇ ?

---

† Asterisks indicate that remarks or speeches have not been revised by the Member concerned.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಎಲ್ಲಾ ಪಟ್ಟಿಯನ್ನು ಬೇಕಾದರೆ ಈ ಸಭೆಯ ಮುಂದಿಡುತ್ತೇನೆ.

I am making it every clear. I object to this insinuation. The details of the particulars of the Ministeres tour will be placed on the table of the House. It is open to the Hon'ble member to see at any time he wants.

ಶ್ರೀ ಟಿ. ಎಂ ಮುಂಜುನಾಥ.—ತಾವು ಮಂತ್ರಿಗಳಾದ ಮೇಲೆ ಪಿರಿಯಾಪಟ್ಟಣಕ್ಕೆ ಎಷ್ಟು ಎಷ್ಟು ಸಲ ಭೇಟಿ ಕೊಟ್ಟಿದ್ದೀರಿ ಎಂಬಿತ್ಯಾದಿ ವಿವರಗಳನ್ನು ಈ ಸಭೆಯ ಮುಂದಿಡಬೇಕು;

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಎಲ್ಲ ಮಂತ್ರಿಗಳು ಇಲ್ಲಿಯವರೆಗೆ ಮಾಡಿರುತ್ಯಾದಿ ಪ್ರವಾಸದ ವಿವರಗಳನ್ನು ಈ ಸಭೆಯ ಮುಂದೆ ಇಡುತ್ತೇನೆ. ಅವನ್ನು ತಾವು ನೋಡಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನು ತಾವು ಯಾವಾಗ ಇಡುವುದು?

ಶ್ರೀ ಎಚ್ ಎಂ. ಚೆನ್ನಬಸಪ್ಪ.—ಈ ಘಳಿಗೆಯಲ್ಲಿಯೇ ಇಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಕೆಲವು ಮಂತ್ರಿಗಳು ವರ್ಷದಲ್ಲಿ 30 ಸಲ ದೆಹಲಿಗೆ ಹೋಗಿ ಬಂದಿದ್ದಾರೆ. ಒಂದು ಸಲ ದೆಹಲಿಗೆ ಹೋಗಿ ಬಂದರೆ 2 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಆದಕಾರಣ ದೆಹಲಿಗೆ ಹೋಗಿ ಬಂದ ಖರ್ಚು ಸಹ ಈ ಪಟ್ಟಿಯಲ್ಲಿ ಸೇರಿದೆಯೇ ಹೇಗೆ?

ಶ್ರೀ. ಎಚ್. ಎಂ. ಚೆನ್ನಬಸಪ್ಪ.—ಸರ್ಕಾರೀ ಕೆಲಸದ ಮೇಲೆ ಹೋಗಿದ್ದ ಪಕ್ಷದಲ್ಲಿ ಆದರ ಖರ್ಚು ಈ ಪಟ್ಟಿಯಲ್ಲಿ ಸೇರಿರುತ್ತದೆ. ಆದರೆ ಅವರು ಬೇರೆ ಕೆಲಸದ ಮೇಲೆ ಹೋಗಿದ್ದರೆ, ಅವರ ಸ್ವಂತ ಖರ್ಚಿನಿಂದ ಹೋಗಿರುತ್ತಾರೆಂದು ನಾನು ಸ್ಪಷ್ಟವಾಗಿ ತಮಗೆ ತಿಳಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ದೆಹಲಿಗೆ ಹೋಗಿ ಬಂದ ಖರ್ಚು ಇದರಲ್ಲಿ ಸೇರಿಲ್ಲವೆಂದು ನಾನು ಹೇಳುತ್ತಿರುವುದು?

ಶ್ರೀ. ಎಚ್. ಎಂ. ಚೆನ್ನಬಸಪ್ಪ.—ನಾನು ಎಲ್ಲ ವಿವರಗಳನ್ನು ಸಭೆಯಮುಂದಿಡುತ್ತೇನೆ; ಅದನ್ನು ತಾವು ನೋಡಿಕೊಳ್ಳಬಹುದು;

Private Educational Institutions in Bombay-Karnataka Area

171. SRI M. M. SAJJAN (Muddebihal).—Will the Minister for Education be pleased to state:—

(*a*) the total number of private educational institutions working in the Districts of Bijapur, Belgaum, Dharwar and Karwar;

(*b*) Whether it is a fact that some managements of private educational institutions of the above districts are not calling general body meetings regularly;

(*c*) whether any representations have been received by Government that many of these institutions are not providing employment to the minorities and Scheduled Caste people;

(*d*) the action taken by the Government on such representations;

(*e*) whether they intend to issue any specific instructions to the private educational institutions of Belgaum area that they should follow strictly the rules in force?